# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ಗುರುತಿನ ಪ್ರಶ್ನೆ**

ದಿನಾಂಕ : 19-03-2021 ಪ್ರಶ್ನೆ ಸಂಖ್ಯೆ : 227 (1690)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 19-03-2021

ಉತ್ತರಿಸುವ ಸಚಿವರು: ಕೃಷಿ ಸಚಿವರು

ವಿಷಯ : ಫಸಲ ಭೀಮಾ ವಿಮಾ ಹಣ ಜಮಾ ಕುರಿತು

(ಅ) 2019-20ನೇ ಸಾಲಿನಲ್ಲಿ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ರೈತರು ಹವಾಮಾನ ಆಧಾರಿತ ಫಸಲ ಭೀಮಾ ಕಂತು ಭರಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಂದಾಯ ಇಲಾಖೆಯವರು ಮುಂಗಾರಿನಲ್ಲಿ ಬೆಳೆಗಳ ಸರ್ವೆಯನ್ನು ಮಾಡಿಸಿ, ಹಿಂಗಾರಿನಲ್ಲಿ ಸರ್ವೆ ಮಾಡಿಸಬೇಕಾಗಿರುವ ನಿಯಮವಿರುವ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ;

(ಇ) ಸದರಿ ಇಲಾಖೆಯವರು ಮುಂಗಾರಿನಲ್ಲಿ ಸರ್ವೆಯನ್ನು ಮಾಡಿ, ಹಿಂಗಾರಿನಲ್ಲಿ ಸರ್ವೆ ಮಾಡದೇ ಇದ್ದುದರಿಂದ ರೈತರ ಖಾತೆಗೆ ವಿಮೆ ಹಣ ಜಮೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಕಂದಾಯ ಇಲಾಖೆಯ ನಿರ್ಲಕ್ಷ್ಯದಿಂದ ತೊಂದರೆಗೆ ಒಳಗಾದ ರೈತರಿಗೆ ವಿಮೆ ಹಣ ಜಮೆ ಮಾಡಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು?